ಆ) ಚಳ್ಳಕೆರೆ ವಿಧಾನ ಸಭಾ ಕ್ಷೇತ್ರದ ಹಳ್ಳಿಗಳಿಗೆ ಪರಿಶಿಷ್ಟ ವರ್ಗದ ಕಾಲೊನಿಗಳಿಗೆ ಸಿ.ಸಿ. ರಸ್ತೆ/ಚರಂಡಿ ಕಾಮಗಾರಿಗಳಿಗೆ ಬಿಡುಗಡೆ ಮಾಡಲಾದ ಅನುದಾನದ ವಿವರ ಈ ಕೆಳಗಿನಂತಿವೆ:–

ಕ್ರ.ಸಂ.	ಗ್ರಾಮದ ಹೆಸರು	ರೂ. ಲಕ್ಷಗಳಲ್ಲಿ
1.	ಆಯ್ಕಲ್ ನಾಯಕರಹಟ್ಟಿ–ಚಳ್ಳಕೆರೆ ತಾಲ್ಲೂಕು	5.00
2.	ಹುಣಸೆಕಟ್ಟೆ–ಚಿತ್ರದುರ್ಗ ತಾಲ್ಲೂಕು	5.00
3.	ಬೋರಪ್ಪನಹಟ್ಟಿ–ಚಳ್ಳಕೆರೆ ತಾಲ್ಲೂಕು	5.00
4.	ಕೆರೆಮುಂದಲಹಟ್ಟ–ಚಳ್ಳಕೆರೆ ತಾಲ್ಲೂಕು	5.00
5.	ಕೆರೆಹಿಂದಲಹಟ್ಟಿ –ಚಳ್ಳಕೆರೆ ತಾಲ್ಲೂಕು	5.00
	ಒಟ್ಟು	25.00

ವಿಷಯ – ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಮೆಟ್ರಿಕ್ ನಂತರ ವಸತಿ ನಿಲಯಗಳು

588 (759) ತುಕಾರಾಮ್ ಇ.(ಸಂಡೂರ್): ಮಾನ್ಯ ಸಮಾಜ ಕಲ್ಯಾಣ ಸಚಿವರು. ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:

ಅ) ಸಂಡೂರ್ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವ್ಯಾಸಂಗ ಮಾಡಲು ಮೆಟ್ರಿಕ್ – ನಂತರದ ಬಾಲಕರ ವಸತಿನಿಲಯಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಸರ್ಕಾರದವರು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಡಿ. ಸುಧಾಕರ್ : (ಸಮಾಜ ಕಲ್ಯಾಣ ಸಚಿವರು):

ಅ) ಹೌದು

ಆ) ಆಯವ್ಯಯದ ಲಭ್ಯತೆಯನ್ನಾಧರಿಸಿ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು.

100 ಹಾಸಿಗೆಗಳ ಆಸ್ಪತ್ರೆ ಕಟ್ಟಡ ಮತ್ತು ಖಾಲಿ ಹುದ್ದೆಗಳ ಭರ್ತಿ ಮಾಡುವುದು.

589 (760) ಶ್ರೀ ತುಕಾರಾಮ್ .ಇ(ಸಂಡೂರ್): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೆ:

ಅ) ಸಂಡೂರ್ ಪಟ್ಟಣದಲ್ಲಿ 100 ಹಾಸಿಗೆಗಳ ಸುಸಜ್ಜಿತವಾದ ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದು, ಇದನ್ನು ಆದಷ್ಟು ಬೇಗನೆ ಉದ್ಘಾಟನೆ ಮಾಡಲಾಗುವುದೆಂದು ಕಳೆದ ಅಧಿವೇಶನದಲ್ಲಿ ಮಾನ್ಯ ಮಂತ್ರಿಗಳು ಈ ಹಿಂದೆ ಭರವಸೆಯನ್ನು ನೀಡಿದ್ದು, ಇನ್ನೂ ಉದ್ಘಾಟನೆ ಮಾಡದೇ ಇರಲು ಕಾರಣವೇನು ;

ಆ) ಸದರಿ ಕಟ್ಟಡವನ್ನು ಸಾರ್ವಜನಿಕರ ಉಪಯೋಗಕ್ಕೆ ಯಾವಾಗ ಒದಗಿಸಲಾಗುವುದು;

ಇ) ಸದರಿ 100 ಹಾಸಿಗೆಗಳ ಆಸ್ಪತ್ರೆಯಲಿ ಮತ್ತು ತಾಲ್ಲೂಕಿನ ಹಲವಾರು ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳ ಮತ್ತು ಇತರೆ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ವಿವರಗಳನ್ನು ಒದಗಿಸುವುದು ?

ಶ್ರೀ ಬಿ. ಶ್ರೀರಾಮುಲು : (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)